**17 ಸುಸ್ಥಿರ ಅಭಿವೃದ್ಧಿ ಗುರಿಗಳ ಸಮಿತಿಯಲ್ಲಿ ಕೋವಿಡ್ – 19 ಪ್ರಸ್ತುತ ಸ್ಥಿತಿಗತಿಗಳ ಬಗ್ಗೆ ಚರ್ಚಿಸ ಬೇಕಾದ ವಿಷಯಗಳು**

| 17 ಸುಸ್ಥಿರ ಅಭಿವೃದ್ಧಿ ಗುರಿಗಳು | ವಿಷಯಗಳು |
|---|---|
| 1. **ಬಡತನದಿಂದ ಮುಕ್ತಿ : ಎಲ್ಲೆಡೆಯಲ್ಲಿಯೂ ಎಲ್ಲಾ ವಿಧದ ಬಡತನವನ್ನು ಕೊನೆಗಾಣಿಸಿ.** | • ಎಲ್ಲಾ ಬಡವರಿಗೆ ಮತ್ತು ದುರ್ಬಲ ವರ್ಗದವರಿಗೆ ಸೂಕ್ತವಾದ ಸಾಮಾಜಿಕ ಸಂರಕ್ಷಣಾ ವ್ಯವಸ್ಥೆಗಳನ್ನು ಮತ್ತು ಕ್ರಮಗಳನ್ನು ಜಾರಿಗೆ ತರಲು ಮತ್ತು ಬಡವರಿಗೆ ಸುರಕ್ಷತಾ ಯೋಜನೆಗಳನ್ನು ವಿಸ್ತರಿಸುವ ತಂತ್ರಗಳನ್ನು ರೂಪಿಸುವುದು.<br>• ಆರೋಗ್ಯದ ಮೇಲಿನ ಪರಿಣಾಮಗಳನ್ನು ತಗ್ಗಿಸುವುದು<br>• ಆರ್ಥಿಕ ಮೇಲಿನ ಪರಿಣಾಮಗಳನ್ನು ತಗ್ಗಿಸುವುದು |
| 2. **ಹಸಿವು ಮುಕ್ತ : ಹಸಿವನ್ನು ಕೊನೆಗಾಣಿಸಿ, ಆಹಾರ ಭದ್ರತೆ ಮತ್ತು ಸುಧಾರಿತ ಪೌಷ್ಠಿಕತೆಯನ್ನು ಸಾಧಿಸಿ ಹಾಗೂ ಸುಸ್ಥಿರ ಕೃಷಿಯನ್ನು ಉತ್ತೇಜಿಸಿ.** | • ಗರ್ಭಿಣಿ ಮತ್ತು ಹಾಲುಣಿಸುವ ತಾಯಂದಿರಿಗೆ ಆರೋಗ್ಯ ಮತ್ತು ಪೋಷಣೆಯ ಬೆಂಬಲ<br>• ಕಟ್ಟಡ ನಿರ್ಮಾಣ ಕಾರ್ಮಿಕರ ಮತ್ತು ಇತರೇ ಕಾರ್ಮಿಕರ ಜಾಗಗಳಿಗೆ ಸುರಕ್ಷತೆ ಮತ್ತು ಪೋಷಣೆಯನ್ನು ತಲುಪಿಸುವುದು.<br>• ಗೃಹಾಧಾರಿತ ಆರೈಕೆಯ ಕುರಿತಾಗಿ ತರಬೇತಿ ಮತ್ತು ಬೆಂಬಲ<br>• ರೈತರು ಮತ್ತು ಕೃಷಿ ಕಾರ್ಮಿಕರಿಗೆ ಸುರಕ್ಷತೆ<br>• ಕೃಷಿ ಉತ್ಪನ್ನಗಳನ್ನು ಹೆಚ್ಚಿಸುವುದು ಮತ್ತು ಶೇಖರಣಾ ವ್ಯವಸ್ಥೆ, ರಿಯಾಯಿತಿಯನ್ನು ಆದ್ಯತೆಯ ಮೇರೆಗೆ ನೀಡುವುದು.<br>• ಸೂಕ್ಷ್ಮ ನೀರಾವರಿ ವ್ಯವಸ್ಥೆ (ಹನಿ ಮತ್ತು ಸಿಂಪರಣೆ) ಮೂಲಕ ನೀರನ್ನು ಸಂರಕ್ಷಿಸುವುದು ಮತ್ತು ಪ್ರದೇಶ ನೀರಾವರಿ ಯೋಜನೆಯನ್ನು ವಿಸ್ತರಿಸುವುದು.<br>• ಗ್ರಾಹಕರ ನೇಮಕಾತಿ ಸೇವಾ ಕೇಂದ್ರ (ಸಿಎಚ್ಎಸ್‌ಸಿ) ಕ್ಕಾಗಿ ಉತ್ತಮ ಕ್ರಮಗಳು<br>• ಸೇವಾ ಕೇಂದ್ರ (ಸಿಎಚ್ಎಸ್‌ಸಿ) ಗಳ ಮೂಲಕ ಸಬ್ಸಿಡಿಯಲ್ಲಿ ಯಂತ್ರೋಪಕರಣ<br>• ರೈತರಿಗೆ ಆಗುವ ಅಪಾರ ನಷ್ಟವನ್ನು ಹಾಗೂ ಮಧ್ಯವರ್ತಿಗಳಿಂದ ಆಗುವ ನಷ್ಟವನ್ನು ತಪ್ಪಿಸಲು ಮತ್ತು ಗ್ರಾಹಕರಿಗೆ ಹಣ್ಣುಗಳು, ತರಕಾರಿಗಳ ವಿಸ್ತರಣೆಗೆ ಹಾಗೂ ಖರೀದಿಗೆ ಅನುಕೂಲವಾಗುವಂತೆ ವ್ಯವಸ್ಥೆಯನ್ನು ಮಾಡುವುದು.<br>• ಹೆಚ್ಚಿನ ಹಣ್ಣುಗಳು, ತರಕಾರಿಗಳು ಹಾಳಾಗದಂತೆ ಮತ್ತು ಹಾಲಿಗೆ ಶೀತ ಸಂಗ್ರಹಣೆ ವ್ಯವಸ್ಥೆ<br>• ಬರ ಪೀಡಿತ ಜಿಲ್ಲೆಗಳಲ್ಲಿರುವ ಸಮಸ್ಯೆ ಮತ್ತು ಸವಾಲುಗಳನ್ನು ಪರಿಹರಿಸಲು ನೀರು ಸಂಗ್ರಹಣೆ ಮತ್ತು ಮರು ಬಳಕೆಗಾಗಿ ಕೃಷಿ ಪ್ರದೇಶವನ್ನು ಕಾಯ್ದಿರಿಸುವುದು. ಮಣ್ಣಿನ ಮತ್ತು ನೀರಿನ ಸಂರಕ್ಷಣೆ, ಕೃಷಿ ಕೊಳಗಳಂತಹ ಬರ ನಿವಾರಣಾ ಚಟುವಟುಕೆಗಳನ್ನು ಜಾರಿಗೆ ತರುವ ತಂತ್ರಗಳು. |
| 3. **ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ : ಎಲ್ಲರಿಗೂ ಎಲ್ಲ ವಯೋಮಾನದಲ್ಲೂ ಆರೋಗ್ಯಕರ ಜೀವನವನ್ನು ಖಾತರಿಪಡಿಸಿ ಯೋಗಕ್ಷೇಮವನ್ನು ಉತ್ತೇಜಿಸಿ.** | • ಸೋಕುಗಳನ್ನು ತಡೆಗಟ್ಟಲು ರೋಗನಿರೋಧಕ ಶಕ್ತಿಯನ್ನು ಬೆಳೆಸುವುದು<br>• ಸಾರ್ವಜನಿಕ ಆರೋಗ್ಯ ಸೇವಾ ವಿತರಣೆಯನ್ನು ಸುಧಾರಿಸುವುದು |
| 4. **ಗುಣಮಟ್ಟದ ಶಿಕ್ಷಣ : ಎಲ್ಲರಿಗೂ ಸಮನ್ವಯ ಮತ್ತು ಸಮಾನ ಗುಣಮಟ್ಟದ ಶಿಕ್ಷಣ ಮತ್ತು ಜೀವನದುದ್ದಕ್ಕೂ ಕಲಿಕೆಯ ಅವಕಾಶಗಳಿಗೆ ಉತ್ತೇಜನವನ್ನು ಖಾತ್ರಿಪಡಿಸಿ.** | • ಬೋಧನೆಯ ಸಮಸ್ಯೆಗಳನ್ನು ಪರಿಹರಿಸಲು ಶಿಕ್ಷಕರ ಸಾಮರ್ಥ್ಯ ವೃದ್ದಿ ಮತ್ತು ಆನ್ ಲೈನ್ ತರಬೇತಿ ವ್ಯವಸ್ಥೆ<br>• ಪಠ್ಯ ಕ್ರಮದ ಬದಲಾವಣೆಗಳು, ಸಹ ಪಠ್ಯಕ್ರಮದ ಕಾರ್ಯಯೋಜನೆಗಳು<br>• ಉನ್ನತ ಶಿಕ್ಷಣಕ್ಕೆ ಸಮುದಾಯ ಆರೋಗ್ಯದ ಪರಿಚಯ |

| | |
|---|---|
| 5. ಲಿಂಗ ಸಮಾನತೆ : ಲಿಂಗ ಸಮಾನತೆಯನ್ನು ಸಾಧಿಸಿ ಮತ್ತು ಮಹಿಳೆಯರು ಹಾಗೂ ಹೆಣ್ಣುಮಕ್ಕಳನ್ನು ಸಶಕ್ತರನ್ನಾಗಿಸಿ | • ಕಟ್ಟಡ ನಿರ್ಮಾಣ ಕಾರ್ಮಿಕರ ಜಾಗದಲ್ಲಿ ಕ್ರೀಚ್ ಗಳ ಪ್ರಾಮುಖ್ಯತೆ<br>• ಕೋವಿಡ್ 19 ಕಾರಣದಿಂದಾಗಿ ದುರ್ಬಲ ಸಮುದಾಯಗಳಿಗೆ ಸೇರಿದ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳನ್ನು ತಪ್ಪಿಸಲು ಕ್ಷೇತ್ರ ಕಾರ್ಯ ಜಾಗೃತಿಯನ್ನು ಮೂಡಿಸುವ ಅಗತ್ಯತೆ |
| 6. ಸ್ವಚ್ಛ ನೀರು ಮತ್ತು ನೈರ್ಮಲ್ಯ: ಎಲ್ಲರಿಗೂ ನೀರು ಮತ್ತು ನೈರ್ಮಲ್ಯದ ಲಭ್ಯತೆ ಮತ್ತು ಅದರ ಸುಸ್ಥಿರ ನಿರ್ವಹಣೆಯನ್ನು ಖಾತ್ರಿಗೊಳಿಸಿ. | • ತ್ಯಾಜ್ಯ ನಿರ್ವಹಣೆ ಮತ್ತು ನೈರ್ಮಲ್ಯದ ನಿರ್ವಹಣೆ<br>• ತುರ್ತುಪರಿಸ್ಥಿತಿಯಲ್ಲಿ ಸಾರ್ವಜನಿಕ ಆರೋಗ್ಯ ಸೇವೆ – ಸ್ಟ್ಯಾಂಡ್ ಸ್ಪಾಟ್‌ಗಳು ಮತ್ತು ಇತರ ಸಾಮಾನ್ಯ ಸಾರ್ವಜನಿಕ ಹಾಗೂ ಖಾಸಗಿ ಸೌಲಭ್ಯಗಳನ್ನು ಪಡೆಯುವ ಸಂದರ್ಭದಲ್ಲಿ ಮತ್ತು ನೀರಿನ ಸಂಗ್ರಹಣೆಯ ಸಮಯದಲ್ಲಿ ಸೋಕು ತಗುಲದಂತೆ ಸುರಕ್ಷಿತ ನೀರಿನ ಮೂಲ |
| 7. ಕೈಗೆಟುಕಬಹುದಾದ ಮತ್ತು ಶುದ್ಧ ಇಂಧನ ಶಕ್ತಿ : ಎಲ್ಲರಿಗೂ ಕೈಗೆಟುಕಬಲ್ಲ, ವಿಶ್ವಾಸಾರ್ಹ, ಸುಸ್ಥಿರ ಮತ್ತು ಆಧುನಿಕ ಇಂಧನದ ಲಭ್ಯತೆಯನ್ನು ಖಾತ್ರಿಗೊಳಿಸಿ. | • ಕೃಷಿ ಮೌಲ್ಯ ಉತ್ಪನ್ನಗಳನ್ನು ಸಶಕ್ತಗೊಳಿಸುವಲ್ಲಿ ಇಂಧನ ಶಕ್ತಿಯ ಪಾತ್ರ<br>• ಕೃಷಿ ಮೌಲ್ಯ ಉತ್ಪನ್ನಗಳನ್ನು ಸಶಕ್ತಗೊಳಿಸುವಲ್ಲಿ ಮತ್ತು ಹೆಚ್ಚಿಸುವಲ್ಲಿ ಇಂಧನ ಶಕ್ತಿಯ ದಕ್ಷತೆ ಮತ್ತು ಸುಸ್ಥಿರ ಪಡಿಸುವುದು ಹೇಗೆ<br>• ಮೈಲ್ ಶೈತ್ಯೀಕರಣ ಮತ್ತು ಶುದ್ಧ ಶಕ್ತಿಯ ಮೂಲಕ ಶೀತಲ ಸಂಗ್ರಹಣೆಯ ಸಾಧ್ಯತೆ ? ನಮ್ಮನ್ನು ತಡೆಯುವ ಸ್ಕೇಲಿಂಗ್ ಏನು ?<br>• ಕರಕುಶಲ ಮತ್ತು ಜವಳಿಗಾಗಿ ಸುಸ್ಥಿರ ಶಕ್ತಿಯ ತಂತ್ರಜ್ಞಾನ<br>• ಯಾಂತ್ರೀಕರಣ ಮತ್ತು ಕರಕುಶಲತೆಯ ನಡುವೆ ಸರಿಯಾದ ಸಮತೋಲನವನ್ನು ಸಾಧಿಸುವ ಮಾರ್ಗ<br>• ಸೌರಶಕ್ತಿ ಚಾಲಿತ ನೀರಾವರಿ |
| 8. ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ : ಎಲ್ಲರಿಗೂ ಸುಸ್ಥಿರವಾದ, ಸಮನ್ವಯ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆ, ಸಂಪೂರ್ಣ ಮತ್ತು ಉತ್ಪಾದಕ ಉದ್ಯೋಗ ಹಾಗೂ ಗೌರವಯುತವಾದ ಕೆಲಸವನ್ನು ಉತ್ತೇಜಿಸಿ. | • ವಲಸೆ ನಿರ್ಮಾಣ ಕಾರ್ಮಿಕರಿಗೆ ಮೊಬೈಲ್ ಸೇವೆಗಳ ಮಹತ್ವ<br>• ಕಟ್ಟಡ ನಿರ್ಮಾಣ ಕಾರ್ಮಿಕರ ಜಾಗದಲ್ಲಿ ಪೂರಕ ಸುರಕ್ಷತೆ ಮತ್ತು ಪೋಷಣೆ<br>• ಕಟ್ಟಡ ನಿರ್ಮಾಣ ಕಾರ್ಮಿಕರ ಜಾಗದಲ್ಲಿ ನಿರ್ಮಾಣ ಕಾರ್ಮಿಕರ ನೋದಣಿಯನ್ನು ಹೆಚ್ಚಿಸುವ ವ್ಯವಸ್ಥೆ<br>• ಯುವಕರಿಗೆ ಕೌಶಲ್ಯ ತರಬೇತಿ ಅವಕಾಶ<br>• ನಿರ್ಮಾಣ ಕಾರ್ಮಿಕರ ಜಾಗದಲ್ಲಿ ಕ್ರೀಚ್‌ಗಳ ಪ್ರಾಮುಖ್ಯತೆ<br>• ಅಸಂಘಟಿತ ಕ್ಷೇತ್ರಗಳಿಗೆ ಆಹಾರ ಪರಿಹಾರವನ್ನು ಸಮರ್ಪಕವಾಗಿ ತಲುಪಿಸುವ ಮಾರ್ಗ |
| 9. ಉದ್ಯಮ, ಆವಿಷ್ಕಾರ ಮತ್ತು ಮೂಲ ಸೌಕರ್ಯ : ಸಧೃಡ ಮೂಲಸೌಕರ್ಯಗಳನ್ನು ನಿರ್ಮಿಸಿ, ಅಂತರ್ಗತವೂ, ಸುಸ್ಥಿರವೂ ಆದ ಕೈಗಾರಿಕೆಗಳನ್ನು ಮತ್ತು ಆವಿಷ್ಕಾರಗಳನ್ನು ಉತ್ತೇಜಿಸಿ. | • ರಾಜ್ಯದ ಮೂಲೆ ಮೂಲೆಗಳಿಗೆ ಮಾಹಿತಿಯನ್ನು ಜಾಗೃತಿಯನ್ನು ಹರಡಲು ರೇಡಿಯೋ ವಿಶೇಷವಾಗಿ ಸಮುದಾಯ ರೇಡಿಯೋದ ತಂತ್ರಗಾರಿಕೆ.<br>• ಐಇಸಿ ಮಾಹಿತಿ ಕೈಪಿಡಿ, ವಸ್ತುಗಳನ್ನು ಅಭಿವೃದ್ಧಿ ಪಡಿಸುವಿಕೆ<br>• ಕೋವಿಡ್ 19 ಪರಿಸ್ಥಿತಿಯ ಪ್ರತಿಕ್ರಿಯೆಯ ದಾಖಲೆ |
| 10. ಅಸಮಾನತೆಗಳ ಇಳಿಕೆ : ದೇಶಗಳೊಳಗೆ ಮತ್ತು ದೇಶಗಳ ನಡುವೆ ಅಸಮಾನತೆಯನ್ನು ಇಳಿಸಿ | • ಕಳಂಕವನ್ನು ಮತ್ತು ದೀನದಲಿತರ ವಿರುದ್ಧ ತಾರತಮ್ಯ ಕಡಿಮೆ ಮಾಡುವುದು<br>• ಬಡತನ ಅಸಮನಾನತೆಯ ಕುರಿತಾಗಿ ಗ್ರಾಮ ಪಂಚಾಯತ್ ಮಟ್ಟದಲ್ಲಿ ಸಂವೇದನೆ<br>• ಗ್ರಾಮ ಮತ್ತು ಬ್ಲಾಕ್ ಮಟ್ಟದಲ್ಲಿ ಮೇಕ್ ಇನ್ ಇಂಡಿಯಾ ಮತ್ತು ಮೊಬೈಲ್ ಆವಿಷ್ಕಾರ<br>• ರೈತರು, ಕೃಷಿ ಕಾರ್ಮಿಕರು, ಉತ್ಪಾದಕರಿಗೆ, ಗ್ರಾಹಕರಿಗೆ ನೇರ ಸಂಪರ್ಕ ಕಲ್ಪಿಸುವ ಹಾಗೂ ವ್ಯಾಪಾರ ರಕ್ಷಣೆಯ ನಿಯಮಗಳು |

| | |
|---|---|
| | • ಕೆಲಸಕ್ಕಾಗಿ ವಲಸೆ ಕಾರ್ಮಿಕರಿಗೆ ಗ್ರಾಮೀಣ ಸೌಲಭ್ಯಗಳು<br>• ಬಡತನ ನಿವಾರಣೆ, ಆಹಾರ ಸುರಕ್ಷತೆ, ಆರೋಗ್ಯ ಪ್ರಚಾರಕ್ಕಾಗಿ ಗೃಹ ಮಟ್ಟದ ಯೋಜನೆ<br>• ಸಣ್ಣ ನೀರಾವರಿ, ಸೂಕ್ಷ್ಮ ಕೈಗಾರಿಕೆಗಳ ಉತ್ತೇಜನ |
| 11. **ಸುಸ್ಥಿರ ನಗರಗಳು ಮತ್ತು ಸಮುದಾಯಗಳು : ನಗರಗಳನ್ನು ಮತ್ತು ಜನವಸತಿ ಪ್ರದೇಶಗಳನ್ನು ಸಮನ್ವಯ, ಸುರಕ್ಷಿತ, ಸದೃಢ ಮತ್ತು ಸುಸ್ಥಿರಗೊಳಿಸಿ.** | • ವಾರ್ಡ್ ಸಮಿತಿ ಮತ್ತು ಗ್ರಾಮ ಸಭೆಗಳನ್ನು ಬಲಪಡಿಸುವುದು<br>• ಕೊಳೆಗೇರಿ ಜನಸಂಖ್ಯೆಯ ಮೂಲಭೂತ ಅಗತ್ಯಗಳನ್ನು ತಲುಪಿಸುವುದು<br>• ದುರ್ಬಲ ವರ್ಗದವರ ಅಗತ್ಯಗಳಿಗೆ ತುರ್ತು ಸಾರಿಗೆ ವ್ಯವಸ್ಥೆಗಳು<br>• ಕೋವಿಡ್ 19 ಲಾಕ್‌ಡೌವನ್ ಸಮಯದಲ್ಲಿ ರೂಪಿಸಿದ್ದ ಟ್ರಾಫಿಕ್ ವ್ಯವಸ್ಥೆಯನ್ನು ಮುಂದಿನ ದಿನಗಳಲ್ಲೂ ಅಗತ್ಯತೆಯ ಆಧಾರದ ಮೇಲೆ ವ್ಯವಸ್ಥೆಗೊಳಿಸುವುದು ಮತ್ತು ರಸ್ತೆ ಸುರಕ್ಷತೆಯನ್ನು ಸುಧಾರಿಸುವ ತಂತ್ರಗಳು |
| 12. **ಸುಸ್ಥಿರ ಬಳಕೆ ಮತ್ತು ಉತ್ಪಾದನೆ : ಸುಸ್ಥಿರ ಬಳಕೆ ಮತ್ತು ಉತ್ಪಾದನಾ ವಿನ್ಯಾಸಗಳನ್ನು ಖಾತ್ರಿಗೊಳಿಸಿ.** | • ಉತ್ಪಾದನೆ ಮತ್ತು ಬೇಡಿಕೆಯ ನಡುವಿನ ಅಂತರವನ್ನು ಸರಿತೂಗಿಸುವುದು ಮತ್ತು ಒಗ್ಗೂಡಿಸುವಿಕೆ (ಭೂ ಆಧಾರಿತ ಮತ್ತು ಕೃಷಿಯೇತರ) (Convergence) |
| 13. **ಹವಾಮಾನ ಕ್ರಮ : ಹವಾಮಾನ ಬದಲಾವಣೆ ಮತ್ತು ಅದರ ಪರಿಣಾಮಗಳನ್ನು ತಡೆಯಲು ತುರ್ತು ಕ್ರಮಗಳನ್ನು ತೆಗೆದುಕೊಳ್ಳಿ.** | • ಕೋವಿಡ್ 19 ನಂತರದ ಲಾಕ್ ಡೌನ್ ಅವಧಿಯಲ್ಲಿ ಪರಿಸರ ಸಂರಕ್ಷಣೆಯ ಪ್ರಯೋಜನಗಳನ್ನು (ಗಾಳಿ ಮತ್ತು ನೀರಿನ ಕಡಿಮೆ ಮಾಲಿನ್ಯದಂತೆ) ಲಾಕ್‌ಡೌನ್‌ನ ನಂತರದ ಅವಧಿಯಲ್ಲೂ ಸಹ ಉಳಿಸಿಕೊಳ್ಳಲು ರೂಪಿಸಬಹುದಾದ ಕಾರ್ಯತಂತ್ರಗಳು ಮತ್ತು ಅನುಷ್ಠಾನ<br>• ಸರಳ ಜೀವನ ಮತ್ತು ಮನೆ ಆಧಾರಿತ ಆಹಾರ ಪದ್ದತಿಯಿಂದಾಗಿ ಸಾವುಗಳ ಸಂಖ್ಯೆ ಕಡಿಮೆಯಾಗಿರುವ ವಿಚಾರದ ಕುರಿತು ಅವಲೋಕನ<br>• ಖಾಸಗಿ ವಾಹನಗಳ ಬಳಕೆಯನ್ನು ಉತ್ತೇಜಿಸುವುದುಮ ಕಾರ್ ಪೂಲಿಂಗ್ ಮನೆಯಿಂದ ಕಛೇರಿ ಕೆಲಸವನ್ನು ನಿರ್ವಹಿಸುವ ಸಂಪ್ರದಾಯವನ್ನು ಬೆಳೆಸುವ ಕುರಿತಾಗಿ ಆಲೋಚನೆ |
| 14. **ಜಲದಡಿಯ ಜೀವರಾಶಿ :ಸುಸ್ಥಿರ ಅಭಿವೃದ್ಧಿಗಾಗಿ ಮಹಾಸಾಗರಗಳು, ಸಮುದ್ರಗಳು ಮತ್ತು ಸಾಗರ ಸಂಪನ್ಮೂಲಗಳನ್ನು ಉಳಿಸಿ ಮತ್ತು ಸುಸ್ಥಿರವಾಗಿ ಬಳಸಿ.** | • ಕೋವಿಡ್ 19 ರ ಸವಾಲುಗಳನ್ನು ಎದುರಿಸಲು ಬೀಚ್ ಲ್ಯಾಂಡಿಗ್ ಕೇಂದ್ರಗಳ ಮೂಲಕ ವಿಕೇಂದ್ರೀಕೃತ ಕೊಯ್ಲು ಅಭಿವೃದ್ಧಿ<br>• ವಲಸೆ ಮೀನು ಕಾರ್ಮಿಕರ ನಿರ್ಧಿಷ್ಟ ಪಾತ್ರವನ್ನು ನಿರ್ಣಯಿಸುವುದು ಮತ್ತು ಅವರ ಸುರಕ್ಷತೆ, ಸೌಲಭ್ಯಗಳನ್ನು ಒದಗಿಸುವುದು.<br>• ಕರಾವಳಿ ಮಾಲಿನ್ಯವನ್ನು ನಿಯಂತ್ರಿಸುವ ಕಾರ್ಯತಂತ್ರದ ಯೋಜನೆಯ ಅಭಿವೃದ್ದಿ<br>• ಕರಾವಳಿ ಸಮುದ್ರದಲ್ಲಿ ಎಸೆಯುತ್ತಿರುವ ತ್ಯಾಜ್ಯ ಕಸಗಳ ಪ್ರಭಾವದ ಮೌಲ್ಯಮಾಪನ, ಮೀನುಗಾರಿಕೆಯ ಮಾಲಿನ್ಯ ಅವಶೇಷಗಳು ಮತ್ತು ಪ್ರವಾಸೋದ್ಯಮ ಆದಾಯದಿಂದ ಪರಿಹಾರವನ್ನ ನೀಡುವ ವ್ಯವಸ್ಥೆ |
| 15. **ಭೂಮಿ ಮೇಲಿನ ಜೀವಜಾಲ : ಭೌಗೋಳಿಕ ಪರಿಸರ ವ್ಯವಸ್ಥೆಯನ್ನು ರಕ್ಷಿಸಿ, ಮರುಸ್ಥಾಪಿಸಿ ಮತ್ತು ಸುಸ್ಥಿರವಾಗಿ ಬಳಸಿ, ಅರಣ್ಯಗಳ ಸುಸ್ಥಿರ ನಿರ್ವಹಣೆ, ಮರುಭೂಮೀ ಕರಣವನ್ನು ನಿಲ್ಲಿಸಿ ಮತ್ತು ಭೂಮಿ ಹಾಳುಗೆಡುವುದನ್ನು ತಡೆದು ಮರುಸ್ಥಾಪಿಸಿ ಹಾಗೂ ಜೈವಿಕ ವೈವಿಧ್ಯತೆಯ ನಷ್ಟವನ್ನು ತಡೆಯಿರಿ.** | • ಸುಸ್ಥಿರ ಜೀವನೋಪಾಯದ ಅವಕಾಶಗಳನ್ನು ಅನುಸರಿಸಲು ಸ್ಥಳೀಯ ಸಮುದಾಯಗಳ ಸಾಮರ್ಥ್ಯವನ್ನು ಹೆಚ್ಚಿಸುವುದು.<br>• ಎನರ್ಜಿ ಡ್ರೈವನ್ ಪ್ರೊಡಕ್ಟೀವ್ ಅಪ್ಲೀಕೇಶನ್‌ಗಳನ್ನು ಸ್ಕೇಲಿಂಗ್ ಮಾಡಲು ಪರಿಸರ ನೀತಿಯನ್ನು ಸಕ್ರಿಯಗೊಳಿಸುವ ಕಾರ್ಯತಂತ್ರ<br>• ಪರಿಸರ ವ್ಯವಸ್ಥೆಯ ವಿವಿಧ ಭಾಗಗಳಲ್ಲಿ ತೆಗೆದುಕೊಳ್ಳಬಹುದಾದ ಪ್ರಮುಖ ನೀತಿಗಳು ಯಾವುವು ಮತ್ತು ಅವುಗಳನ್ನು ತಲುಪುವ ಮಾರ್ಗಗಳು |

| | |
|---|---|
| 16. **ಶಾಂತಿ, ನ್ಯಾಯ ಮತ್ತು ದೃಢ ಸಂಸ್ಥೆಗಳು : ಸುಸ್ಥಿರ ಅಭಿವೃದ್ಧಿಗಾಗಿ ಶಾಂತಿಯುತ ಮತ್ತು ಸಮನ್ವಯ ಸಮಾಜಗಳನ್ನು ಉತ್ತೇಜಿಸಿ, ಎಲ್ಲರಿಗೂ ನ್ಯಾಯದ ಲಭ್ಯತೆಯನ್ನು ಒದಗಿಸಿ, ಎಲ್ಲಾ ಹಂತಗಳಲ್ಲೂ ಪರಿಣಾಮಕಾರಿ, ಉತ್ತರದಾಯಿತ್ವ ಮತ್ತು ಸಮನ್ವಯತೆಯಿರುವ ಸಂಸ್ಥೆಗಳನ್ನು ನಿರ್ಮಿಸಿ.** | • ಕೋವಿಡ್ 19 ಬೆದರಿಕೆಯನ್ನು ಎದುರಿಸಲು ಎಲ್ಲಾ ಹಂತಗಳಲ್ಲಿ ವಿಶೇಷವಾಗಿ ಗ್ರಾಮ ಪಂಚಾಯತ್ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಭಾಗವಹಿಸುವಿಕೆ ಮತ್ತು ಪ್ರತಿನಿಧಿಗಳ ನಿರ್ಧಾರ ತೆಗೆದುಕೊಳ್ಳುವಿಕೆಯನ್ನು ಬಲಪಡಿಸುವ ಕಾರ್ಯತಂತ್ರಗಳು<br>• ಕೋವಿಡ್ 19 ಪರಿಸ್ಥಿತಿಯಲ್ಲಿ ಎಲ್ಲಾ ಹಂತಗಳ ಸರ್ಕಾರದ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಪರಿಣಾಮಕಾರಿ, ಜವಾಬ್ದಾರಿಯುತ ಮತ್ತು ಪಾರದರ್ಶಕತೆಯನ್ನು ಖಚಿತಪಡಿಸುವುದು<br>• ಸಾರ್ವಜನಿಕರಿಗೆ ಸರಿಯಾದ ಮಾಹಿತಿಯನ್ನು ತಲುಪಿಸುವುದು ಮತ್ತು ಸಾರ್ವಜನಿಕ ಮನೋಭಾವವನ್ನು ಬದಲಿಸುವುದು ಹಾಗೂ ಸಾರ್ವಜನಿಕ ನಡವಳಿಕೆಯನ್ನು ನಿಯಂತ್ರಿಸುವುದು |
| **17. ಗುರಿಗಳಿಗಾಗಿ ಸಹಭಾಗಿತ್ವ : ಸುಸ್ಥಿರ ಅಭಿವೃದ್ಧಿಗಾಗಿ ಜಾರಿ ಸಾಧನಗಳನ್ನು ಬಲಪಡಿಸಿ ಮತ್ತು ಜಾಗತಿಕ ಸಹಭಾಗಿತ್ವವನ್ನು ಪುನಶ್ಚೇತನಗೊಳಿಸಿ** | • ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಗಾಗಿ ಇರುವ ಪ್ರಸ್ತುತ ಪರಿಸ್ಥಿತಿಯ ಸವಾಲುಗಳಿಂದ ಹೊರ ಬರಲು ರಾಜ್ಯದ ಮೇಲ್ವಿಚಾರಣಾ ಚೌಕಟ್ಟು |